# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೫ Part – V | ಬೆಂಗಳೂರು, ಗುರುವಾರ, ೧೩, ಆಗಸ್ಟ್, ೨೦೨೬ (ಶ್ರಾವಣ, ೨೨, ಶಕವರ್ಷ, ೧೯೪೮) BENGALURU, THURSDAY, 13, AUGUST, 2026 ( SHRAVANA , 22, SHAKAVARSHA, 1948) | ನಂ. ೭೧೪ No. 714 |
|---|---|---|



**ಜಿಲ್ಲಾನಗರಾಭಿವೃದ್ಧಿಕೋಶ,**
**ಜಿಲ್ಲಾಧಿಕಾರಿಯವರಕಾರ್ಯಾಲಯ,**
**ತುಮಕೂರುಜಿಲ್ಲೆ, ತುಮಕೂರು.**

ಕರ್ನಾಟಕ ಸರ್ಕಾರ

**ದೂರವಾಣಿಸಂ::0816-2955247**
**Email :**ka.tumakuru.dudc@gmail.com
**Website:www.tumakurududc.mrc.gov.in**
**2ನೇ ಮಹಡಿ, ರೂಂ ನಂ.211**
**ವಿಎವಿಧಾನಸೌಧ, ತುಮಕೂರು- 572101.**


**ಸಂ:ಡಿಯುಡಿಸಿ/ಸಿಬ್ಬಂದಿ/ಸಿಆರ್/55/2026-27** **ದಿನಾಂಕ:12 -08-2026**

## "ನೇಮಕಾತಿ ಅಧಿಸೂಚನೆ"

**ವಿಷಯ:-** ತುಮಕೂರು ಜಿಲ್ಲೆಯ ನಗರಸಭೆಗಳಲ್ಲಿ ಸಂಖ್ಯಾತಿರಿಕ್ತ (Supermumerary) ಪೌರಕಾರ್ಮಿಕ ಹುದ್ದೆಗಳ ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ: ನಅಇ/ 176/ ಜಿಇಎಲ್/ 2022 (ಭಾ-2) (ಇ) ದಿನಾಂಕ: 09-03-2023.
2. ಸರ್ಕಾರದ ಆದೇಶ ಸಂಖ್ಯೆ: ನಅಇ/ 176/ ಜಿಇಎಲ್/ 2022 (ಭಾ-2) (ಇ) ದಿನಾಂಕ: 29-03-2023.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ನಡಾವಳಿ ಆದೇಶ ಸಂಖ್ಯೆ: 1971724/ DMA/ EST2/ GRPD/ 54/ 2025 ದಿನಾಂಕ:13-01-2026
4. ಸರ್ಕಾರದ ಆದೇಶ ಸಂ:ಸಿಆಸುಇ/ 02/ ಸೇಹಿಮ/ 2026 ಬೆಂಗಳೂರು ದಿನಾಂಕ :13-05-2026
5. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ:1554386/ DMA/ EST2/ GRPD/ 31/ 2024, ದಿನಾಂಕ:08-06-2026

*******

ಉಲ್ಲೇಖ(1) & (2)ರ ಸರ್ಕಾರದ ಆದೇಶಗಳನ್ವಯ ರಾಜ್ಯದ ನಗರಸಭೆಗಳಿಗೆ ಹಂಚಿಕೆ ಮಾಡಲಾದ 132 ಸಂಖ್ಯಾತಿರಿಕ್ತ (Supermumerary) ಪೌರಕಾರ್ಮಿಕರ ಹುದ್ದೆಗಳಿಗೆ ಉಲ್ಲೇಖ(3)ರಲ್ಲಿ ತಿಪಟೂರು & ಶಿರಾ ನಗರಸಭೆಗಳಿಗೆ ಕ್ರಮವಾಗಿ 04 & 02 ಹುದ್ದೆಗಳನ್ನು ಹಂಚಿಕೆ ಮಾಡಿದ್ದು, ಗ್ರೂಪ್ ಡಿ ಹುದ್ದೆಗಳ ನೇಮಕಾತಿ ಸಕ್ಷಮ ಪ್ರಾಧಿಕಾರ ಜಿಲ್ಲಾಧಿಕಾರಿಗಳಾಗಿರುವುದರಿಂದ ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖ(1) & (2)ರ ಸರ್ಕಾರದ ಆದೇಶದಲ್ಲಿನ ಷರತ್ತುಗಳನ್ವಯ ಜಿಲ್ಲಾಧಿಕಾರಿಗಳ ಹಂತದಲ್ಲಿ ನಿಯಮಾನುಸಾರ ನೇಮಕಾತಿಗೆ ಕ್ರಮವಹಿಸಲು ಆದೇಶಿಸಿರುವಂತೆ ತುಮಕೂರು ಜಿಲ್ಲೆಯ ತಿಪಟೂರು & ಶಿರಾ ನಗರಸಭೆಗಳಿಗೆ ಹಂಚಿಕೆ ಮಾಡಲಾಗಿರುವ ಸಂಖ್ಯಾತಿರಿಕ್ತ (Supermumerary) ಪೌರಕಾರ್ಮಿಕ ಹುದ್ದೆಗಳನ್ನು

ಉಲ್ಲೇಖ(4) & (5)ರ ಆದೇಶಗಳಂತೆ ಒಳಮೀಸಲಾತಿಯನ್ನು ಅಳವಡಿಸಿಕೊಂಡು ಭರ್ತಿ ಮಾಡಲು ಆದೇಶಿಸಿರುತ್ತಾರೆ. ಆದ್ದರಿಂದ ಉಲ್ಲೇಖ(5)ರ ರೀತ್ಯಾ ಅಧಿಸೂಚನೆಯನ್ನು ಹೊರಡಿಸಲಾಗಿದೆ.

| ವಿವರ | ದಿನಾಂಕ | ಅರ್ಜಿನಮೂನೆಪಡೆಯುವವಿಳಾಸ |
|---|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ | 17-08-2026 | ತಿಪಟೂರು ಮತ್ತು ಶಿರಾ ನಗರಸಭೆಗಳಲ್ಲಿ. |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 19-09-2026 | |

| ಕ್ರ. ಸಂ. | ಒಟ್ಟು ಹುದ್ದೆ | ಕನಿಷ್ಠವಿದ್ಯಾರ್ಹತೆ/ಅರ್ಹತೆ | ವೇತನ ಶ್ರೇಣಿ |
|---|---|---|---|
| 1. | 06 | 1. ವಿದ್ಯಾರ್ಹತೆ ಅನ್ವಯಿಸುವುದಿಲ್ಲ.<br>2. ಕನ್ನಡ ಮಾತನಾಡಲುಗೊತ್ತಿರಬೇಕು.<br>3. ತುಮಕೂರು ಜಿಲ್ಲೆಯ ತಿಪಟೂರು ಮತ್ತು ಶಿರಾ ನಗರಸಭೆಗಳಲ್ಲಿ ಪೌರಕಾರ್ಮಿಕ ಹುದ್ದೆಯಲ್ಲಿ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ ಹಾಗೂ ದಿನಗೂಲಿ ಆಧಾರದಲ್ಲಿ 2 ವರ್ಷಗಳಿಗೆ ಕಡಿಮೆಯಿಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮಗಳ ಪ್ರಾರಂಭದ ದಿನಾಂಕದಿಂದಲೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆದ್ಯತೆ.<br>4. ಗರಿಷ್ಟ ವಯೋಮಿತಿ:- 18 ರಿಂದ 55 ವರ್ಷಗಳೊಳಗಿರಬೇಕು.<br>5. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು. | 27000-46675 |

**2. ಹುದ್ದೆಗಳವರ್ಗೀಕರಣ**

ತುಮಕೂರು ಜಿಲ್ಲೆಯ ನಗರಸಭೆಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳ ವರ್ಗೀಕರಣ ಈ ಕೆಳಗಿನಂತಿದೆ.

**ತಿಪಟೂರು ನಗರಸಭೆಗೆ ಸಂಖ್ಯಾತಿರಿಕ್ತ (Supernumerary) ಮಂಜೂರಾದ ಹುದ್ದೆಗಳ ಸಂಖ್ಯೆ 04.**

| ಕ್ರ. ಸಂ | ಮೀಸಲಾತಿ ವರ್ಗೀಕರಣ | ಮಹಿಳೆ | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ | ಮಾಜಿ ಸೈನಿಕ | ತೃತೀಯ ಲಿಂಗದ ಅಭ್ಯರ್ಥಿ | ಸಾಮಾನ್ಯ | ವರ್ಗದ ಒಟ್ಟು ಹುದ್ದೆಗಳು |
|---|---|---|---|---|---|---|---|---|---|---|
| 1 | ಪರಿಶಿಷ್ಟಜಾತಿ (ಪ್ರವರ್ಗ-A) | 0 | 0 | 0 | 1 | 0 | 0 | 0 | 0 | **1** |
| 2 | ಪರಿಶಿಷ್ಟಜಾತಿ (ಪ್ರವರ್ಗ-B) | 0 | 0 | 0 | 0 | 0 | 0 | 0 | 0 | **0** |
| 3 | ಪರಿಶಿಷ್ಟಜಾತಿ (ಪ್ರವರ್ಗ-C) | 0 | 0 | 0 | 0 | 0 | 0 | 0 | 0 | **0** |
| 4 | ಪರಿಶಿಷ್ಟಪಂಗಡ | 0 | 0 | 0 | 0 | 0 | 0 | 0 | 0 | **0** |
| 5 | ಪ್ರವರ್ಗ-I | 0 | 0 | 0 | 0 | 0 | 0 | 0 | 0 | **0** |
| 6 | ಪ್ರವರ್ಗ-II A | 1 | 0 | 0 | 0 | 0 | 0 | 0 | 0 | **1** |
| 7 | ಪ್ರವರ್ಗ-II B | 0 | 0 | 0 | 0 | 0 | 0 | 0 | 0 | **0** |
| 8 | ಪ್ರವರ್ಗ-III A | 0 | 0 | 0 | 0 | 0 | 0 | 0 | 0 | **0** |
| 9 | ಪ್ರವರ್ಗ-III B | 0 | 0 | 0 | 0 | 0 | 0 | 0 | 0 | **0** |
| 10 | ಸಾಮಾನ್ಯ ಅಭ್ಯರ್ಥಿ | 0 | 0 | 0 | 1 | 1 | 0 | 0 | 0 | **2** |
| **ಒಟ್ಟು** | | **1** | **0** | **0** | **2** | **1** | **0** | **0** | **0** | **4** |

**ಶಿರಾ ನಗರಸಭೆಗೆ ಸಂಖ್ಯಾತಿರಿಕ್ತ (Supernumerary) ಮಂಜೂರಾದ ಹುದ್ದೆಗಳ ಸಂಖ್ಯೆ 02.**

| ಕ್ರ. ಸಂ | ಮೀಸಲಾತಿ ವರ್ಗೀಕರಣ | ಮಹಿಳೆ | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ | ಮಾಜಿ ಸೈನಿಕ | ತೃತೀಯ ಲಿಂಗದ ಅಭ್ಯರ್ಥಿ | ಸಾಮಾನ್ಯ | ವರ್ಗದ ಒಟ್ಟು ಹುದ್ದೆಗಳು |
|---|---|---|---|---|---|---|---|---|---|---|
| 1 | ಪರಿಶಿಷ್ಟಜಾತಿ (ಪ್ರವರ್ಗ-A) | 0 | 0 | 0 | 0 | 0 | 0 | 0 | 0 | **0** |
| 2 | ಪರಿಶಿಷ್ಟಜಾತಿ (ಪ್ರವರ್ಗ-B) | 0 | 0 | 0 | 0 | 0 | 0 | 0 | 0 | **0** |
| 3 | ಪರಿಶಿಷ್ಟಜಾತಿ (ಪ್ರವರ್ಗ-C) | 0 | 0 | 0 | 0 | 0 | 0 | 0 | 0 | **0** |
| 4 | ಪರಿಶಿಷ್ಟಪಂಗಡ | 0 | 0 | 0 | 0 | 0 | 0 | 0 | 0 | **0** |
| 5 | ಪ್ರವರ್ಗ-I | 0 | 0 | 0 | 0 | 0 | 0 | 0 | 1 | **1** |
| 6 | ಪ್ರವರ್ಗ-II A | 0 | 0 | 0 | 0 | 0 | 0 | 0 | 0 | **0** |
| 7 | ಪ್ರವರ್ಗ-II B | 0 | 0 | 0 | 0 | 0 | 0 | 0 | 0 | **0** |
| 8 | ಪ್ರವರ್ಗ-III A | 0 | 0 | 0 | 0 | 0 | 0 | 0 | 0 | **0** |
| 9 | ಪ್ರವರ್ಗ-III B | 0 | 0 | 0 | 0 | 0 | 0 | 0 | 0 | **0** |
| 10 | ಸಾಮಾನ್ಯಅಭ್ಯರ್ಥಿ | 1 | 0 | 0 | 0 | 0 | 0 | 0 | 0 | **1** |
| **ಒಟ್ಟು** | | **1** | **0** | **0** | **0** | **0** | | **0** | **1** | **2** |

**ವಿಶೇಷ ಸೂಚನೆ:** ಸರ್ಕಾರದ ಆದೇಶ ಸಂಖ್ಯೆ:ನಅಇ 176 ಜಿಇಎಲ್ 2022 (ಭಾ-2) (ಇ) ದಿನಾಂಕ:09.03.2026 & 29.03.2026 ಆದೇಶದಲ್ಲಿನ ಷರತ್ತುಗಳನ್ವಯ ಸದರಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.

**ಅರ್ಹತೆ ಹಾಗೂ ನೇಮಕಾತಿ ವಿಧಾನ.**

1. ಅರ್ಜಿ ನಮೂನೆ ಪಡೆಯುವ ವಿಳಾಸ ನಗರಸಭೆ- ತಿಪಟೂರು/ಶಿರಾ ಕಛೇರಿಗಳಿಂದ ಅರ್ಜಿಗಳನ್ನು ಪಡೆದು, ತದನಂತರ ಭರ್ತಿ ಮಾಡಲಾದ ಅರ್ಜಿಗಳನ್ನು ಸಂಬಂಧಿಸಿದ ನಗರಸಭೆಗಳಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿಯಲ್ಲಿ ಪಡೆಯುವುದು.
2. ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಸಕ್ಷಮ ಪ್ರಾಧಿಕಾರದಿಂದ ನಿಗಧಿತ ನಮೂನೆಗಳಲ್ಲಿಯೇ ಕಡ್ಡಾಯವಾಗಿ ಪಡೆದಿಟ್ಟುಕೊಂಡಿರತಕ್ಕದ್ದು.
3. ಸದರಿ ಪೌರಕಾರ್ಮಿಕರ ವೇತನವನ್ನು ಎಸ್.ಎಫ್.ಸಿ ಅನುದಾನದಡಿ ರಾಜ್ಯ ಆರ್ಥಿಕ ಆಯೋಗದ ಶಿಫಾರಸ್ಸಿನಂತೆ ಇರುವ ಅಧಿಕಾರ ಹಂಚಿಕೆಗೆ ಸೀಮಿತಗೊಳಿಸುವುದು ಹಾಗೂ ಇದಕ್ಕೆ ತಗಲುವ ಹೆಚ್ಚುವರಿ ಆರ್ಥಿಕ ಹೊರೆಯನ್ನು ಸಂಬಂಧಪಟ್ಟ ನಗರಸಭೆಗಳ ಸ್ವಂತ ನಿಧಿಯಿಂದ ಭರಿಸತಕ್ಕದ್ದು.
4. ಭರ್ತಿ ಮಾಡಿದ ಅರ್ಜಿಗಳನ್ನು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಕಛೇರಿ ವೇಳೆಯಲ್ಲಿ (ರಜಾ ದಿನ ಹೊರತುಪಡಿಸಿ) ಆಯಾ ನಗರಸಭೆ ಕಛೇರಿಗೆ ಸಲ್ಲಿಸುವುದು.
5. ಈ ನೇಮಕಾತಿಯು ಸರ್ಕಾರದ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ ಸುತ್ತೋಲೆಯ ಷರತ್ತಿಗೊಳಪಟ್ಟಿದೆ.
6. ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಎಲ್ಲಾ ವಿವರಗಳನ್ನು ಓದಿ ಅರ್ಥೈಸಿಕೊಂಡು ಅನಂತರವೇ ತಮಗೆ ಅನ್ವಯವಾಗುವ ವಿವರವನ್ನು ಭರ್ತಿ ಮಾಡತಕ್ಕದ್ದು ಒಮ್ಮೆ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ವಿವರಗಳನ್ನು ತಿದ್ದುಪಡಿ ಮಾಡಲು ದಾಖಲೆಗಳನ್ನು ಸೇರ್ಪಡೆ ಮಾಡುವಂತೆ ನೀಡುವ ಯಾವುದೇ ಮನವಿಗಳನ್ನು ಪರಿಗಣಿಸಲಾಗಿವುದಿಲ್ಲ.
7. ಅಭ್ಯರ್ಥಿಗಳು ಗ್ರಾಮೀಣ, ಕನ್ನಡ ಮಾದ್ಯಮ, ಮಾಜಿ ಸೈನಿಕ, ಯೋಜನಾ ನಿರಾಶ್ರಿತ, ಅಂಗವಿಕಲ ಹಾಗೂ ಜಾತಿಯ ಮೀಸಲಾತಿಯಡಿಯಲ್ಲಿ ನೇಮಕಾತಿ ಕೋರಿದ್ದಲ್ಲಿ, ಸದರಿ ಮೀಸಲಾತಿಗೆ ನಿಗಧಿತ ನಮೂನೆಯಲ್ಲಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ

ಪಡೆದಿರುವ ಪ್ರಮಾಣ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು, ಅರ್ಜಿ ಸಲ್ಲಿಸುವ ಅವಧಿ ಮುಗಿದ ನಂತರ ಸಲ್ಲಿಸಲಾಗುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ/ ತಿರಸ್ಕರಿಸಲಾಗುವುದು.

8. ಅರ್ಜಿಯೊಂದಿಗೆ ಅಭ್ಯರ್ಥಿಗಳು ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ಅ). ಅಭ್ಯರ್ಥಿಗಳ ವಯಸ್ಸನ್ನು ಶೈಕ್ಷಣಿಕ ದಾಖಲಾತಿಗಳು/ ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ/ ಪಡಿತರ ಚೀಟಿ ದಾಖಲೆಗಳನ್ನು ಆಧರಿಸಿ ನಿರ್ಧರಿಸಲಾಗುವುದರಿಂದ ಸದರಿ ದಾಖಲಾತಿಗಳನ್ನು ಸಲ್ಲಿಸುವುದು.

ಆ). ಅಭ್ಯರ್ಥಿಗಳು ಜಿಲ್ಲಾಧಿಕಾರಿಗಳಿಂದ ನೇರ ಪಾವತಿಯಡಿ ನೇಮಕವಾಗಿದ್ದಲ್ಲಿ, ನೇಮಕಾತಿ ಆದೇಶದ ಪ್ರತಿ.

ಇ). ಹಾಲಿ ನಗರಸಭೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು ಅಂದರೆ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಸಮಾನ ಕೆಲಸಕ್ಕೆ ಸಮಾನವೇತನ ಆಧಾರದ ಮೇಲೆ ಕನಿಷ್ಟ 2 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರುವ/ಸಲ್ಲಿಸುತ್ತಿರುವ ಬಗ್ಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಕಛೇರಿ ಮುಖ್ಯಸ್ಥರಿಂದ ದೃಢೀಕರಣ ಪತ್ರ.

ಈ). ದಿನಗೂಲಿ/ ಕ್ಷೇಮಾಭಿವೃದ್ಧಿ/ಸಮಾನ ಕೆಲಸಕ್ಕೆ ಸಮಾನ ವೇತನ ಆಧಾರದ ಮೇಲೆ ನೇಮಕಾತಿ ಆಗಿರುವ ಕುರಿತು ಕೌನ್ಸಿಲ್ ನಡವಳಿ ಪ್ರತಿ ಮತ್ತು ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಆದೇಶದ ಪ್ರತಿಯನ್ನು ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸುವುದು.

ಉ). ಅಭ್ಯರ್ಥಿಯು ದೈಹಿಕವಾಗಿ ಹಾಗೂ ಮಾನಸಿಕವಾಗಿ ಅರ್ಹವಾಗಿರುವ ಬಗ್ಗೆ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರವನ್ನು ಸರ್ಕಾರಿ ವೈದ್ಯರಿಂದ ಪಡೆದು ಸಲ್ಲಿಸುವುದು.

9. ಅರ್ಜಿಯೊಂದಿಗೆ ಇತ್ತೀಚಿನ ಭಾವಚಿತ್ರವನ್ನು ಹಾಗೂ ಮೀಸಲಾತಿ ಕೋರಿರುವ ದಾಖಲೆಗಳೊಂದಿಗೆ ಎಲ್ಲಾ ದಾಖಲೆಗಳನ್ನು ಸಂಬಂಧಿಸಿದ ನಗರಸಭೆಯ ಪೌರಾಯುಕ್ತರಿಂದ ದೃಢೀಕರಿಸಿ ಸಲ್ಲಿಸುವುದು ಹಾಗೂ ಚಾಲ್ತಿ ಸಾಲಿನ ಪ್ರಮಾಣ ಪತ್ರಗಳನ್ನು ಮಾತ್ರ ಸಲ್ಲಿಸುವುದು.

10. ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿದ ನಂತರ ನೇರಪಾವತಿಯಡಿ ಮಂಜೂರಾದ ಹುದ್ದೆಗಳು ತಂತಾನೇ ರದ್ದಾಗುತ್ತವೆ.

11. ಪ್ರಸ್ತಾಪಿತ ಪೌರಕಾರ್ಮಿಕರ ಖಾಯಂಮಾತಿಯು ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಇತರೆ ವರ್ಗಗಳ ನೌಕರರ/ ಸಿಬ್ಬಂದಿಗೆ ಪೂರ್ವ ನಿರ್ದೇಶನವಾಗತಕ್ಕದಲ್ಲ.

12. ಮೀಸಲಾತಿ ಕೋರಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸದೆ ಇದ್ದಲ್ಲಿ ಅಥವಾ ಚಾಲ್ತಿ ಸಾಲಿನ ನಿಗಧಿತ ನಮೂನೆಯಲ್ಲಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳು ಕೋರುವ ಮೀಸಲಾತಿಗೆ ಪರಿಗಣಿಸುವುದಿಲ್ಲ.

13. ಅರ್ಜಿಯಲ್ಲಿ ಅರ್ಜಿದಾರರು ನೀಡುವ ವಿಳಾಸಕ್ಕೆ ಎಲ್ಲಾ ಪತ್ರ ವ್ಯವಹಾರಗಳನ್ನು ಕಳುಹಿಸಿಕೊಡಲಾಗುವುದು. ಆದ್ದರಿಂದ ಅರ್ಜಿಯಲ್ಲಿ ನಮೂದಿಸಿರುವ ವಿಳಾಸವೇ ಅಂತಿಮವಾಗಿರುತ್ತದೆ.

14. ನಗರಸಭೆಗಳಲ್ಲಿ ಹಾಲಿ ನೇರಪಾವತಿ/ ಕ್ಷೇಮಾಭಿವೃದ್ಧಿ/ ದಿನಗೂಲಿ ಆಧಾರದ ಮೇಲೆ 02 ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸಿರುವ ಪೌರಕಾರ್ಮಿಕರು 02 ವರ್ಷಗಳಿಗೆ ಮೇಲ್ಪಟ್ಟು ನಗರಸಭೆಯಲ್ಲಿ ವೇತನ ಪಡೆದ ದಾಖಲಾತಿಗಳನ್ನು ನೇಮಕಾತಿಯಲ್ಲಿ ಆದ್ಯತೆಗೆ ಪರಿಗಣಿಸಲಾಗುವುದು.

15. ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸಿರುವ ಯಾವುದೇ ದಾಖಲೆಗಳು ಮತ್ತು ಮಾಹಿತಿಗಳು ನಕಲಿ/ತಪ್ಪು/ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಕಂಡುಬಂದಲ್ಲಿ ಮತ್ತು ಯಾವುದೇ ಕ್ರಿಮಿನಲ್ ವ್ಯವಹರಣೆಗಳಲ್ಲಿ ಒಳಪಟ್ಟಿದಲ್ಲಿ ಅಂತಹ ಅಭ್ಯರ್ಥಿ ಆಯ್ಕೆಯಿಂದ ಅಥವಾ ಆಯ್ಕೆ, ನಂತರ ನೇಮಕಾತಿಯನ್ನು ರದ್ದುಪಡಿಸಲಾಗುವುದು.

16. ಸಂಖ್ಯಾತಿರಿಕ್ತವಾಗಿ ಸೃಜಿಸಲಾದ ಹುದ್ದೆಗಳು ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ನಿವೃತ್ತಿ/ ನಿಧನ/ ವಜಾಗೊಳಿಸುವಿಕೆ/ ಇತರೆ ಕಾರಣಗಳಿಂದ ತೆರವಾದ ದಿನಾಂಕದಿಂದ ರದ್ದಾಗುತ್ತವೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



17. ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮುಖಾಂತರ ಆಯ್ಕೆ ಮಾಡಲಾಗುವುದು.

18. ನಗರಸಭೆಗಳಲ್ಲಿ ನೇರಪಾವತಿ/ ದಿನಗೂಲಿ ಕ್ಷೇಮಾಭಿವೃದ್ಧಿ ಅಧಿನಿಯಮ/ಸಮಾನ ಕೆಲಸಕ್ಕೆ ಸಮಾನ ವೇತನದಡಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಒಟ್ಟು 06 ಸಂಖ್ಯಾತ್ತಿರಿಕ್ತ ಪೌರಕಾರ್ಮಿಕರ (Supernumerary) ಹುದ್ದೆಗಳನ್ನು ಸೃಜಿಸಿದ್ದು, ಈ ಹುದ್ದೆಗಳ ನೇಮಕಾತಿಗಾಗಿ ಇರುವ ವಯೋಮಿತಿಯನ್ನು ಸಡಿಲಿಸಿ ನೇಮಕಾತಿಗಾಗಿ ಗರಿಷ್ಟ ವಯೋಮಿತಿಯನ್ನು 55 (ಒಂದು ಬಾರಿಗೆ) ವರ್ಷಕ್ಕೆ ಹೆಚ್ಚಿಸಲಾಗಿದೆ.

19. ಆಯ್ಕೆ ಮಾಡಲಾದ ಅಭ್ಯರ್ಥಿಗಳು ನಿಗಧಿತ ಅವಧಿಯೊಳಗೆ ಕರ್ತವ್ಯಕ್ಕೆ, ವರದಿ ಮಾಡಿಕೊಳ್ಳದೆ ಇದ್ದ ಪಕ್ಷದಲ್ಲಿ ಸದರಿ ಅಭ್ಯರ್ಥಿ ಬದಲಾಗಿ ಅದೇ ಪ್ರವರ್ಗದ ಮೀಸಲಾತಿಯಲ್ಲಿ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಆಗುವ ಮತ್ತೊಬ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.

20. ಅಂತಿಮವಾಗಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮುನ್ನ ಯಾವುದೇ ಹಂತದಲ್ಲಿ ಯಾವುದೇ ಕಾರಣ/ಮಾಹಿತಿ ನೀಡದೆ ನೇಮಕಾತಿ ಪ್ರಕ್ರಿಯೆಯನ್ನು ಸಡಿಲಗೊಳಿಸುವ ಅಥವಾ ಹೆಚ್ಚುವರಿ ಷರತ್ತನ್ನು ವಿಧಿಸುವ ಅಥವಾ ತುಂಬಲಾಗುವ ಹುದ್ದೆಗಳ ಸಂಖ್ಯೆಗಳನ್ನು ಬದಲಾಯಿಸುವ ಅಥವಾ ನೇಮಕಾತಿ ಪ್ರಕ್ರಿಯೆಯನ್ನು ರದ್ದುಪಡಿಸುವ ಅಧಿಕಾರವನ್ನು ನೇಮಕಾತಿ ಅಧ್ಯಕ್ಷರು ಕಾಯ್ದಿರಿಸಿಕೊಂಡಿರುತ್ತಾರೆ.

21. ಹುದ್ದೆಗಳ ವರ್ಗೀಕರಣದ ವಿವರಗಳನ್ನು ಅನುಸೂಚಿಯಲ್ಲಿ ತೋರಿಸಲಾಗಿದೆ. ನೇಮಕಾತಿ/ಮೀಸಲಾತಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ, ಬದಲಾವಣೆ ಹಾಗೂ ರದ್ದುಪಡಿಸುವಿಕೆಯ ಸಂಪೂರ್ಣ ಅಧಿಕಾರವು ನೇಮಕಾತಿಯ ಸಕ್ಷಮ ಪ್ರಾಧಿಕಾರದ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

**ಅಧ್ಯಕ್ಷರು,**
**ಆಯ್ಕೆ ಮತ್ತು ನೇರನೇಮಕಾತಿ ಪ್ರಾಧಿಕಾರ**
**ಹಾಗೂ ಜಿಲ್ಲಾಧಿಕಾರಿ, ತುಮಕೂರುಜಿಲ್ಲೆ.**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU